ಓ.ಎಸ್. ನಂಃ 159/2019
ಪಿ.ಡಬ್ಲ್ಯ-1 (ಶಿವಲೀಲಾ)

ದಿನಾಂಕ: 13-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಬಿ.ಎಸ್.ಕೆ. 1ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಹಾಜರಪಡಿಸಿರುವ ದಾಖಲೆಗಳು ಯಾವುವು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ದಾಖಲೆಗಳನ್ನು ಯಾವ ಕಾರಣಕ್ಕಾಗಿ ಹಾಜರ ಮಾಡಿದ್ದೇನೆಂದು ಹೇಳಲು ಬರುವುದಿಲ್ಲ. ನಾನು ಖಾಯಂ ಆಗಿ ಮಸಗುಪ್ಪಿ ಗ್ರಾಮದಲ್ಲಿ ವಾಸ ಇದ್ದೇನೆ ಎಂದರೆ ಸರಿ. ಮಸಗುಪ್ಪಿ ಗ್ರಾಮದಲ್ಲಿ ನಮಗೆ ಸಾಕಷ್ಟು ಜಮೀನು ಇದೆ ಅದರಿಂದ ಒಳ್ಳೆಯ ಉತ್ಪನ್ನ ಸಹ ಬರುತ್ತದೆ ಎಂದರೆ ಸರಿ.

2. ಕೊಳವಿ ಗ್ರಾಮದಲ್ಲಿ ನಮ್ಮ ತಂದೆಗೆ ಯಾರು ಅಡುಗೆ ಮಾಡಿಕೊಡುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮಹಾದೇವಿ ಇವರನ್ನು ಮದುವೆ ಮಾಡಿಕೊಂಡಿರುವ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾನು ಸುಮಾರು ವರ್ಷಗಳಿಂದ ಮಸಗುಪ್ಪಿಯಲ್ಲಿ ವಾಸ ಇದ್ದುದ್ದರಿಂದ ಈ ದಾವೆ ಕಾಲಾವಧಿ ಮುಗಿದ ನಂತರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಹಾಜರಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್. ನಂಃ 159/2019
ಪಿ.ಡಬ್ಲ್ಯೂ-1 (ಶಿವಲೀಲಾ)

**ಪಾಟೀಸವಾಲುಃ ಶ್ರೀ.ಎಸ್.ಕೆ.ಎಚ್. ಪ್ರತಿವಾದಿ 3ಎ ಯಿಂದ 3ಸಿ ರವರ ಪರ ವಕೀಲರಿಂದಃ**

ಪಾಟೀಸವಾಲು ಏನು ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ